## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಅರಣ್ಯ ಇಲಾಖೆಯಲ್ಲಿ ಅತ್ಯುತ್ತಮ ಸಾಧನೆಗೈದ ಅಧಿಕಾರಿ/ಸಿಬ್ಬಂದಿಗಳಿಗೆ 2024ನೇ ಸಾಲಿನ ಮುಖ್ಯಮಂತ್ರಿ ಪದಕ ನೀಡುವ ಕುರಿತು.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ: ಅಪಜೀ 267 ಅಪಸೇ 2017, ದಿನಾಂಕ: 04.12.2017.

2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ), ಬೆಂಗಳೂರು ರವರ ಪತ್ರ ಸಂಖ್ಯೆ:KFD/HoFF/B1(EST)/14/2023-PnR-KFD ದಿನಾಂಕ:23.05.2025.

************

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ. ಸಂ (1)ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಅರಣ್ಯ ಸಂರಕ್ಷಣೆ, ಅಕ್ರಮ ಕಡಿತಲೆ, ವನ್ಯಜೀವಿ ಸಂರಕ್ಷಣೆ, ಅರಣ್ಯ ಪ್ರದೇಶವನ್ನು ಒತ್ತುವರಿದಾರರಿಂದ ತೆರವುಗೊಳಿಸುವುದು ಇತ್ಯಾದಿ ಕೆಲಸಕಾರ್ಯಗಳ ಮೂಲಕ ಗಣನೀಯ ಸಾಧನೆ ಮಾಡಿದ ರಾಜ್ಯ ಅರಣ್ಯ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ಮಾನ್ಯ ಮುಖ್ಯಮಂತ್ರಿಯವರ ಪದಕವನ್ನು ನೀಡುವ ಸಂಬಂಧ ರಚಿಸಲಾದ ನಿಯಮಗಳಿಗೆ ಸರ್ಕಾರದ ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ ಕ್ರ.ಸಂ (2)ರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಪ್ರಸ್ತಾವನೆಯಲ್ಲಿ ಅರಣ್ಯ ಇಲಾಖೆಯಲ್ಲಿ ವೃತ್ತವಾರು ಸಮಿತಿ ಹಾಗೂ ರಾಜ್ಯ ಮಟ್ಟದ ಸಮಿತಿಗಳನ್ನು ರಚಿಸಲಾಗಿದ್ದು, ಸರ್ಕಾರಿ ಆದೇಶದಲ್ಲಿ ಸೂಚಿಸಿರುವಂತೆ ಅರಣ್ಯ ಸಂರಕ್ಷಣೆ, ಅಕ್ರಮ ಕಡಿತಲೆ ತಡೆಗಟ್ಟುವಿಕೆ, ವನ್ಯಜೀವಿ ಸಂರಕ್ಷಣೆ, ಅರಣ್ಯ ಪ್ರದೇಶವನ್ನು ಒತ್ತುವರಿದಾರರಿಂದ ತೆರವುಗೊಳಿಸುವುದು, ನೆಡುತೋಪು ಬೆಳಸುವಂತಹ ಸಾಧನೆ, ಅಭಿವೃದ್ಧಿ ಕಾರ್ಯಗಳು, ಮಾನವ ಪ್ರಾಣಿ ಸಂಘರ್ಷ ಹಾಗೂ ಇತರೆ ನವೀನ ಆಲೋಚನೆಗಳನ್ನು ಉಪಯೋಗಿಸಿರುವ ಇತ್ಯಾದಿ ಕೆಲಸ ಕಾರ್ಯಗಳ ಮೂಲಕ ಗಣನೀಯ ಸಾಧನೆ ಮಾಡಿದ ಅರಣ್ಯ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಂದ ಸ್ವೀಕರಿಸಿದ ಅರ್ಜಿಗಳನ್ನು ವೃತ್ತವಾರು ಸಮಿತಿಗಳಿಂದ ಕ್ರೋಢೀಕರಿಸಿ, ವೃತ್ತಮಟ್ಟದಿಂದ ಸ್ವೀಕೃತವಾದ ಅರ್ಜಿಗಳನ್ನು ರಾಜ್ಯ ಮಟ್ಟದ ಸಮಿತಿಯ ಸಭೆಯಲ್ಲಿ ಕೂಲಂಕಷವಾಗಿ ಪರಿಶೀಲಿಸಿ, ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿಗಳು ಮಾಡಿರುವ ಸಾಧನೆ ಅರ್ಹತೆಗಳನ್ನು ಸರ್ಕಾರದ ಆದೇಶದಲ್ಲಿ ತಿಳಿಸಿರುವ ಮಾನದಂಡಗಳಂತೆ ವೃಂದವಾರು ಹಾಗೂ ಕ್ಷೇತ್ರವಾರು ಅಂತಿಮಗೊಳಿಸಿ ವಲಯ ಅರಣ್ಯಾಧಿಕಾರಿ, ಉಪ ವಲಯ ಅರಣ್ಯಾಧಿಕಾರಿ, ಅರಣ್ಯ ರಕ್ಷಕ, ಅರಣ್ಯ ವೀಕ್ಷಕ, ಗಸ್ತು ಅರಣ್ಯ ಪಾಲಕ, ವಾಹನ ಚಾಲಕ, ನೆಡುತೋಪು ಕಾವಲುಗಾರ, ಆನೆ ಮಾವುತ, ಆನೆ ಜಮೇದಾರ, ಕ್ಷೇಮಾಭಿವೃದ್ಧಿ ನೌಕರರು/ಸಿಬ್ಬಂದಿಗಳನ್ನು ಮಾನ್ಯ ಮುಖ್ಯಮಂತ್ರಿಗಳ ಪದಕಕ್ಕೆ ಅರ್ಹರೆಂದು ಪರಿಗಣಿಸಿ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿ ಸಲ್ಲಿಸಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಸಮಗ್ರವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ:

**ಸರ್ಕಾರದ ಆದೇಶ ಸಂಖ್ಯೆ: ಎಫ್‌ಇಇ 180 ಎಫ್‌ಎನ್‌ಜಿ 2025, ಬೆಂಗಳೂರು, ದಿನಾಂಕ: 10.07.2025.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಅರಣ್ಯ ಇಲಾಖೆಯಲ್ಲಿ ವನ್ಯಜೀವಿ ಸಂರಕ್ಷಣೆ, ಅರಣ್ಯ ಸಂರಕ್ಷಣೆ, ಅರಣ್ಯ ಕೃಷಿ, ಅರಣ್ಯ ನಿರ್ವಹಣೆ ತರಬೇತಿ, ಸಂಶೋಧನೆ, ಕಾರ್ಯಯೋಜನೆ, ಜನರ ಪಾಲ್ಗೊಳ್ಳುವಿಕೆ, ಅಭಿವೃದ್ಧಿ ಕಾರ್ಯಗಳು, ಮಾನವ ಪ್ರಾಣಿ ಸಂಘರ್ಷ,

prabhavaa.com

ಇತರೆ ನವೀನ ಆಲೋಚನೆಗಳನ್ನು ಉಪಯೋಗಿಸಿ ಗಣನೀಯ ಸಾಧನೆ, ಅರಣ್ಯ ವನ್ಯಜೀವಿ, ಅಪರಾಧಗಳ ತಡೆ ಮತ್ತು ವಶಕ್ಕೆ ತೆಗೆದುಕೊಳ್ಳುವುದು, ಕ್ರೀಡಾಕೂಟಗಳಲ್ಲಿ ಅತ್ಯುತ್ತಮ ಸಾಧನೆಗೈದ, ಅರಣ್ಯಕ್ಕೆ ಸಂಬಂಧಿಸಿದಂತೆ ಕೆಲಸಗಳಲ್ಲಿ ಯಾವುದೇ ರೀತಿಯ ಶೌರ್ಯ ಮತ್ತು ದಿಟ್ಟತನ ತೋರಿಸಿರುವ ಕೆಳಕಂಡ ಅಧಿಕಾರಿ/ಸಿಬ್ಬಂದಿಗಳಿಗೆ 2024 ನೇ ಸಾಲಿನ ಮುಖ್ಯಮಂತ್ರಿಗಳ ಪದಕವನ್ನು ಪ್ರಧಾನ ಮಾಡಲು ಸರ್ಕಾರ ಅನುಮೋದನೆ ನೀಡಿ ಆದೇಶಿಸಿದೆ.

**2024ನೇ ಸಾಲಿನ ಮುಖ್ಯಮಂತ್ರಿಗಳ ಪದಕಕ್ಕಾಗಿ ಆಯ್ಕೆಯಾದ ಅಧಿಕಾರಿ/ಸಿಬ್ಬಂದಿಗಳ ವಿವರ.**

| ಕ್ರ. ಸಂ | ಅಧಿಕಾರಿ/ನೌಕರರ ಹೆಸರು (ಶ್ರೀ ಶ್ರೀಮತಿ) | ಪದನಾಮ | ಸಾಧನೆಯ ಕ್ಷೇತ್ರ |
|---|---|---|---|
| 1 | ಪ್ರಾಣೇಶ.ಎಸ್ | ಉಪ ವಲಯ ಅರಣ್ಯಾಧಿಕಾರಿ –ಕಂ ಮೋಜಣಿದಾರ | ಅರಣ್ಯ ಒತ್ತುವರಿ ತೆರವು |
| 2 | ಹೊನ್ನೂರಸ್ವಾಮಿ ಎಂ.ಕೆ | ಉಪ ವಲಯ ಅರಣ್ಯಾಧಿಕಾರಿ –ಕಂ ಮೋಜಣಿದಾರ | ಅರಣ್ಯ ಒತ್ತುವರಿ ತೆರವು |
| 3 | ಪ್ರಕಾಶ ಎಂ | ಅರಣ್ಯ ರಕ್ಷಕ | ಅರಣ್ಯ ಒತ್ತುವರಿ ತೆರವು |
| 4 | ಅಶ್ವಿನ್ ಎಂ.ಜೆ | ಅರಣ್ಯ ರಕ್ಷಕ | ಶೌರ್ಯ ಮತ್ತು ದಿಟ್ಟತನ, ಅರಣ್ಯ ಅಭಿವೃದ್ಧಿ. |
| 5 | ಕಿರಣ್ ಕುಮಾರ್ ಪಿ.ಹೆಚ್ | ವಲಯ ಅರಣ್ಯಾಧಿಕಾರಿ | ಅರಣ್ಯ ಒತ್ತುವರಿ ತೆರವು |
| 6 | ರಮೇಶ್ ಖೋತ್ | ಅರಣ್ಯ ರಕ್ಷಕ | ಅರಣ್ಯ ಒತ್ತುವರಿ ತೆರವು |
| 7 | ಸಂಜೀವ. ಆರ್. ಸಂಸುದ್ದಿ | ವಲಯ ಅರಣ್ಯಾಧಿಕಾರಿ | ಅರಣ್ಯ ಒತ್ತುವರಿ ತೆರವು |
| 8 | ಗುರುರಾಜ್ ಎಸ್ ಗೌಡ | ಉಪ ವಲಯ ಅರಣ್ಯಾಧಿಕಾರಿ –ಕಂ ಮೋಜಣಿದಾರ | ವನ್ಯಜೀವಿ ಸಂರಕ್ಷಣೆ |
| 9 | ಶಿವಾನಂದ್ ಎಸ್ ನಿಂಗನಿ | ವಲಯ ಅರಣ್ಯಾಧಿಕಾರಿ | ಶೌರ್ಯ ಮತ್ತು ದಿಟ್ಟತನ, ಅರಣ್ಯ ಅಭಿವೃದ್ಧಿ. |
| 10 | ವಿಠಲ್ ಭೀರಪ್ಪ ಶಿರಗಾನ್ವಿ | ಅರಣ್ಯ ರಕ್ಷಕ | ವನ್ಯಜೀವಿ ಸಂರಕ್ಷಣೆ |

prabhavaa.com

| | | | |
|---|---|---|---|
| 11 | ಸಿ. ಅನಿಲ್ ಕುಮಾರ್ | ಉಪ ವಲಯ ಅರಣ್ಯಾಧಿಕಾರಿ –ಕಂ ಮೋಜಣಿದಾರ | ವನ್ಯಜೀವಿ ಸಂರಕ್ಷಣೆ |
| 12 | ಖಲಂದರ್ | ವಲಯ ಅರಣ್ಯಾಧಿಕಾರಿ | ಕಾರ್ಯ ಯೋಜನೆ ಹಾಗೂ ನಕಾಶೆ ಸಿದ್ಧಪಡಿಸುವುದು. |
| 13 | ಹನುಮಂತಪ್ಪ ಉಪ್ಪಾರ | ಅರಣ್ಯ ರಕ್ಷಕ | ಶೌರ್ಯ ಮತ್ತು ದಿಟ್ಟತನ, ಅರಣ್ಯ ಅಭಿವೃದ್ಧಿ. |
| 14 | ಶಿವಪ್ಪ, ಎಂ ತಳವಾರ | ಉಪ ವಲಯ ಅರಣ್ಯಾಧಿಕಾರಿ –ಕಂ ಮೋಜಣಿದಾರ | ಶೌರ್ಯ ಮತ್ತು ದಿಟ್ಟತನ, ಅರಣ್ಯ ಅಭಿವೃದ್ಧಿ. |
| 15 | ಸುಭಾಶ್ ಕುಮಾರ್ ಬಿ.ಕೆ | ಉಪ ವಲಯ ಅರಣ್ಯಾಧಿಕಾರಿ –ಕಂ ಮೋಜಣಿದಾರ | ಮಾನವ-ವನ್ಯಜೀವಿ ಸಂಘರ್ಷ |
| 16 | ಅರ್ಜುನ್ ಎಸ್.ಆರ್ | ಉಪ ವಲಯ ಅರಣ್ಯಾಧಿಕಾರಿ –ಕಂ ಮೋಜಣಿದಾರ | ಅರಣ್ಯ ಸಂರಕ್ಷಣೆ |
| 17 | ಹಾವಪ್ಪ | ಉಪ ವಲಯ ಅರಣ್ಯಾಧಿಕಾರಿ –ಕಂ ಮೋಜಣಿದಾರ | ಅರಣ್ಯ ಸಂರಕ್ಷಣೆ |
| 18 | ಐಶ್ವರ್ಯ ಆರ್ ಗೌಡರ್ | ಉಪ ವಲಯ ಅರಣ್ಯಾಧಿಕಾರಿ –ಕಂ ಮೋಜಣಿದಾರ | ತರಬೇತಿ ಮತ್ತು ಮಾನವ ಸಂಪನ್ಮೂಲ ನಿರ್ವಹಣೆ |
| 19 | ಸಚಿನ್ ನಿಂಬಾಳಕರ | ಉಪ ವಲಯ ಅರಣ್ಯಾಧಿಕಾರಿ –ಕಂ ಮೋಜಣಿದಾರ | ಕಾನೂನು ವಿಷಯಗಳ ನಿರ್ವಹಣೆ |
| 20 | ಜಿತೇಶ್ ಪಿ | ಅರಣ್ಯ ರಕ್ಷಕ | ಅಕ್ರಮವಾಗಿ ಮರ ಕಡಿಯುವಿಕೆ ತಡೆಗಟ್ಟುವುದು/ಕಳ್ಳಸಾಗಣೆ ತಡೆಗಟ್ಟುವುದು. |
| 21 | ಗುಂಡು | ಆನೆ ಮಾವುತ | ಆನೆ ಶಿಬಿರ |
| 22 | ಸಿದ್ಧರಾಜು ಎಸ್.ಎಸ್ | ವಲಯ ಅರಣ್ಯಾಧಿಕಾರಿ | ವನ್ಯಜೀವಿ ಸಂರಕ್ಷಣೆ |

prabhavaa.com

| | | | |
|---|---|---|---|
| 23 | ಪ್ರದೀಪ್ ಎಂ ನಾಯ್ಕ್ | ಉಪ ವಲಯ ಅರಣ್ಯಾಧಿಕಾರಿ –ಕಂ ಮೋಜಣಿದಾರ | ಕಾರ್ಯ ಯೋಜನೆ ಹಾಗೂ ನಕಾಶೆ ಸಿದ್ಧಪಡಿಸುವುದು. |
| 24 | ಸಲೀಮ್ ಎಂ | ಅರಣ್ಯ ರಕ್ಷಕ | ಶೌರ್ಯ ಮತ್ತು ದಿಟ್ಟತನ, ಅರಣ್ಯ ಅಭಿವೃದ್ಧಿ. |
| 25 | ರಮೇಶ್ ಹೆಚ್ | ಪಶು ವೈದ್ಯರು | ವನ್ಯಜೀವಿ ಸಂರಕ್ಷಣೆ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಗೀತಾ ಎಂ ಪಾಟೀಲ)
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ
ಅ೦೨ (ಸೇವೆಗಳು)
10/07

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು(ಜಿ ಮತ್ತ ಎಸ್‌ಎಸ್‌ಎ)-(ಇ ಮತ್ತು ಆರ್‌ಎಸ್‌ಎಸ್‌ಎ)(ಎ & ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು-560001
2. ಪ್ರಧಾನ ಮಹಾಲೇಖಪಾಲರು, (ಲೆಕ್ಕಪತ್ರ-1 ಮತ್ತು 2) ಕರ್ನಾಟಕ ಬೆಂಗಳೂರು-560001.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
4. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
5. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಆಡಳಿತ ಮತ್ತು ಸಮನ್ವಯ), (ಸಿಬ್ಬಂದಿ ಮತ್ತು ನೇಮಕಾತಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
6. ಆಯುಕ್ತರು ಮತ್ತು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ, ಖಜಾನೆ-2, ಖನಿಜ ಭವನ, ಬೆಂಗಳೂರು.
7. ನಿರ್ದೇಶಕರು ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಕೆ.ಪಿ.ಸಿ.ಎಲ್ ಕಟ್ಟಡ 6ನೇ ಮಹಡಿ, ಔಷಧಿ ನಿಯಂತ್ರಣ ಕಛೇರಿ ಆವರಣ, ಪ್ಯಾಲೇಸ್ ರಸ್ತೆ, ಬೆಂಗಳೂರು.
8. ಸರ್ಕಾರದ ಉಪ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 5 & 7) ವಿಧಾನಸೌಧ , ಬೆಂಗಳೂರು
10. ಶಾಖಾ ರಕ್ಷಾ ಕಡತ.

**ಪ್ರತಿಯನ್ನು:**

1. ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರ ಆಪ್ತಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಅರಣ್ಯ)ರವರ ಆಪ್ತ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಸರ್ಕಾರದ ಜಂಟಿ ಕಾರ್ಯದರ್ಶಿ (ಸಮನ್ವಯ ಮತ್ತು ಸೇವೆಗಳು) ರವರ ಆಪ್ತ ಸಹಾಯಕರು, ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.



prabhavaa.com